# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1252
ಸದಸ್ಯರ ಹೆಸರು : ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 19/12/2024
ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಸಾಲಿನಲ್ಲಿ ಗಾಂಜಾ ಮತ್ತು ಡ್ರಗ್ಸ್ ಮಾರಾಟ ಪ್ರಕರಣಗಳು ಎಷ್ಟು ದಾಖಲಾಗಿದೆ : ಎಷ್ಟು ಜನರನ್ನು ಬಂದಿಸಲಾಗಿದೆ : ಎಷ್ಟು ಪ್ರಮಾಣದ ಡ್ರಗ್ಸ್ ಮತ್ತು ಗಾಂಜಾ ವಶಪಡಿಸಿಕೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಸಕ್ತ ಸಾಲಿನಲ್ಲಿ ಡ್ರಗ್ಸ್ ಪೂರೈಕೆ ಮತ್ತು ಮಾದಕ ವಸ್ತು ಸಾಗಾಣಿಕೆ, ಮಾರಾಟ ಹಾಗೂ ಸೇವನೆಗೆ ಸಂಬಂಧಿಸಿದಂತೆ ದಾಖಲಾಗಿರುವ FIR ಗಳ ಹಾಗೂ ಬಂಧಿಸಲಾಗಿರುವ ಆರೋಪಿತರ ಸಂಖ್ಯೆ ಈ ಕೆಳಕಂಡಂತಿದೆ: (ಕೆಳಗಿನ ಕೋಷ್ಟಕ 1 ನೋಡಿ) ಜಿಲ್ಲಾವಾರು ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. (ಕೆಳಗಿನ ಕೋಷ್ಟಕ 2 ನೋಡಿ) |
| ಆ) | ಮಾದಕ ವ್ಯಸನ ಮತ್ತು ಕಳ್ಳಸಾಗಣಿ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಗಾಂಜಾ ಮತ್ತು ಡ್ರಗ್ಸ್ ಸೇವನೆಯ ಎಷ್ಟು ಯುವಕರನ್ನು ರಕ್ಷಿಸಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಮಾದಕ ವ್ಯಸನ/ಮಾದಕ ಸೇವನೆ ಮಾಡುವವರ ಮತ್ತು ಕಳ್ಳಸಾಗಣಿಕೆ ನಡೆಸುವವರ ವಿರುದ್ಧ ಎನ್.ಡಿ.ಪಿ.ಎಸ್. ಕಾಯ್ದೆ ಅಡಿ ಪ್ರಕರಣಗಳನ್ನು ದಾಖಲಿಸಿಕೊಂಡು, ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.<br>ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ಕಲಂ 27(ಬಿ) ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ 3 ನೋಡಿ)<br>ಜಿಲ್ಲಾವಾರು ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ.<br>ಮಾದಕ ವಸ್ತು ಸೇವನೆ ಪ್ರಕರಣಗಳಲ್ಲಿನ ವ್ಯಸನಿಗಳಿಗೆ ದಂಡ ವಿಧಿಸಿ, ಮಾದಕ ಸೇವನೆಯಿಂದಾಗುವ ಆರೋಗ್ಯ ಸಮಸ್ಯೆಗಳು, ಶಾರೀರಿಕ ಮತ್ತು ಮಾನಸಿಕ ಹಾನಿಗಳ ಬಗ್ಗೆ ಅರಿವು ಮೂಡಿಸಲಾಗುವುದು ಹಾಗೂ ಇನ್ನು ಮುಂದೆ ಮಾದಕ ವಸ್ತುಗಳಿಂದ ದೂರವಿರಲು ಅಗತ್ಯ ಸೂಚನೆಯನ್ನು ನೀಡಲಾಗುತ್ತಿದೆ. |

| ವರ್ಷ | ಎಫ್.ಐ.ಆರ್. ಗಳ ಸಂಖ್ಯೆ | ಬಂಧಿತರ ಸಂಖ್ಯೆ |
|---|---|---|
| 2024 (ನವೆಂಬರ್-30 ರವರೆಗೆ) | 3565 | 2417 |

| ವರ್ಷ | ವಶಪಡಿಸಿಕೊಂಡ ಡ್ರಗ್ಸ್ ಪ್ರಮಾಣ (ಕೆ.ಜಿ.ಗಳಲ್ಲಿ) | |
|---|---|---|
| | ಗಾಂಜಾ | ಸಿಂಥೆಟಿಕ್ |
| 2024 (ಆಗಸ್ಟ್-30 ರವರೆಗೆ) | 3038 | 43 |

| ವರ್ಷ | ಸೇವನೆ ಮಾಡುವವರ ವಿರುದ್ಧ ದಾಖಲಿಸಿರುವ ಪ್ರಕರಣಗಳ ಸಂಖ್ಯೆ |
|---|---|
| 2024 (ನವೆಂಬರ್-30 ರವರೆಗೆ) | 1392 |

| | | |
|---|---|---|
| ಇ) | ಶಿಕ್ಷಣ ಸಂಸ್ಥೆಗಳ ಸಮೀಪ ಸೇರಿದಂತೆ ರಾಜ್ಯದಲ್ಲಿ ಗಾಂಜಾ ಮಾರಾಟ ಮತ್ತು ಸೇವನೆ ತಡೆಗೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ : ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ದಿಟ್ಟ ಕ್ರಮಗಳೇನು ಹಾಗೂ ಪೊಲೀಸ್ ಠಾಣೆಗಳಿಂದ ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತಂತೆ ಜಾಗೃತಿ ಮೂಡಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ: ಎಲ್ಲೆಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಗಿದೆ: | ಶಿಕ್ಷಣ ಸಂಸ್ಥೆಗಳ ಸಮೀಪ ಸೇರಿದಂತೆ ರಾಜ್ಯದಲ್ಲಿ ಯುವಜನತೆಯಲ್ಲಿ ಗಾಂಜಾ ಸೇವನೆ ತಡೆಯಲು ಮತ್ತು ಈ ನಂಟಿನಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಮತ್ತು ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>1. **ಜಾಗೃತಿ ಮತ್ತು ಶಿಕ್ಷಣ:**<br>ವಿದ್ಯಾರ್ಥಿ ಜಾಗೃತಿ ಶಿಬಿರಗಳು: ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಅಭಿಯಾನಗಳು ನಡೆಸಿ, ಗಾಂಜಾ ಮತ್ತು ಇತರೆ ಮಾದಕ ವಸ್ತುಗಳ ತೀವ್ರ ಹಾನಿ ಕುರಿತು ಮಾಹಿತಿ ನೀಡಲಾಗುತ್ತಿದೆ.<br>ನಿಮ್ಮ ಆರೋಗ್ಯ ನಿಮ್ಮ ಹೊಣೆಗಾರಿಕೆ: ಕ್ಯಾಂಪೇನ್‌ಗಳ ಮೂಲಕ ಯುವಜನರಿಗೆ ಈ ವ್ಯಸನದಿಂದಾಗುವ ಶಾರೀರಿಕ ಮತ್ತು ಮಾನಸಿಕ ಹಾನಿಗಳನ್ನು ತಿಳಿಸಲಾಗುತ್ತಿದೆ.<br><br>2. **ಹೆಚ್ಚುವರಿ ಸಲಹಾ ಕೇಂದ್ರಗಳು:**<br>ಮಾದಕವಸ್ತು ಸೇವನೆ ಮತ್ತು ಅದರ ಹಾನಿ ನಿವಾರಣೆಗಾಗಿ ಜಿಲ್ಲಾ ಮಟ್ಟದಲ್ಲಿ ಸಮರ್ಪಿತ ಪುನರ್ವಸತಿ ಕೇಂದ್ರಗಳು ಸ್ಥಾಪಿಸಲಾಗಿದೆ.<br><br>3. **ಪುನರ್ವಸತಿ ಮತ್ತು ಚಿಕಿತ್ಸೆ:**<br>ಗಾಂಜಾ ಸೇವನೆಯಿಂದ ಬಳಲುತ್ತಿರುವ ಯುವಜನರನ್ನು ಪುನರ್ವಸತಿ ಕೇಂದ್ರಗಳಿಗೆ ಸೇರಿಸಿ, ಉಚಿತ ಚಿಕಿತ್ಸೆ ಮತ್ತು ಸಲಹಾ ಸೇವೆಗಳನ್ನು ಒದಗಿಸಲಾಗುತ್ತಿದೆ.<br>ಮಾನಸಿಕ ಆರೋಗ್ಯ ಸಹಾಯ ಹಾಟ್‌ಲೈನ್‌ಗಳನ್ನು ರಚಿಸಿ, ಯುವ ಜನರಿಗೆ ಸಮಯೋಚಿತ ಮಾರ್ಗದರ್ಶನ ನೀಡಲಾಗುತ್ತಿದೆ.<br><br>4. **ಅಪರಾಧ ನಿಯಂತ್ರಣ:**<br>ಯುವಜನರು ತೊಡಗುವ ಅಪರಾಧಗಳನ್ನು ತಡೆಗಟ್ಟಲು ವಿಶೇಷ ಪೊಲೀಸ್ ತಂಡಗಳು ಕೆಲಸ ಮಾಡುತ್ತಿವೆ. ಗಾಂಜಾ ಸೇವನೆ ಮಾಡುವ ಸ್ಥಳಗಳನ್ನು ಪತ್ತೆ ಮಾಡುವುದು ಮತ್ತು ನಿಗ್ರಹಿಸಲು ತೀವ್ರ ದಾಳಿ ಮತ್ತು ಚೆಕ್‌ಪೋಸ್ಟ್‌ಗಳು ಮಾಡಲಾಗುತ್ತಿದೆ.<br>ಗಾಂಜಾ ಸೇವನೆ ಸಂಬಂಧಿಸಿದ ಏರಿಯಾ ನಿಗಾವಣೆ: ಸಾರ್ವಜನಿಕ ಸ್ಥಳಗಳಲ್ಲಿ ಗಾಂಜಾ ಬಳಕೆ ತಡೆಯಲು ಬಿಗಿ ಪೊಲೀಸ್ ನಿಗಾವಣೆ ಮತ್ತು ದಂಡ ವಿಧಿಸುತ್ತಿದ್ದಾರೆ.<br><br>5. **ಶಿಕ್ಷಣ ಮತ್ತು ನಿರ್ಬಂದ:**<br>ಗಾಂಜಾ ಸೇವನೆಯಲ್ಲಿ ತೊಡಗಿರುವ ಯುವಜನರಿಗೆ ಕಠಿಣ ಶಿಕ್ಷೆ: ಎನ್.ಡಿ.ಪಿ.ಎಸ್. ಕಾಯ್ದೆ ಅಡಿಯಲ್ಲಿ ಗಾಂಜಾ ಸೇವನೆಯ ಆರೋಪಿ ಯುವಕರಿಗೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುತ್ತದೆ.<br>ಪೋಷಕರ ಜವಾಬ್ದಾರಿಯನ್ನು ಬಲಪಡಿಸಲು ಪೋಷಕರಿಗೆ ಉಚಿತ ತರಬೇತಿ ಮತ್ತು ಮಕ್ಕಳ ಮೇಲೆ ಸೂಕ್ಷ್ಮ ಗಮನವಹಿಸಲು ಪ್ರೇರೇಪಿಸಲಾಗುತ್ತಿದೆ. |

| | | |
|---|---|---|
| | | **6. ಸಾಮಾಜಿಕ ಮಾಧ್ಯಮ ಪ್ರಚಾರ:**<br>ಸಾಮಾಜಿಕ ಮಾಧ್ಯಮ ಮತ್ತು ಸಾರ್ವಜನಿಕ ಜಾಹಿರಾತುಗಳ ಮೂಲಕ ವಿರೋಧ ಚಟುವಟಿಕೆಗಳ ಪ್ರಚಾರ ಮಾಡಲಾಗುತ್ತಿದೆ. |
| ಈ) | ಮಾದಕ ವ್ಯಸನಕ್ಕೆ ಒಳಗಾಗಿರುವ ಶಾಲಾ, ಕಾಲೇಜು ಮಕ್ಕಳನ್ನು ಪತ್ತೆಹಚ್ಚಲು ಯಾವ ಕ್ರಮಗಳನ್ನು ಕೈಗೊಂಡಿದೆ: ಅವರನ್ನು ವ್ಯಸನ ಮುಕ್ತರಾಗಿಸಲು ಕೈಗೊಂಡಿರುವ ಕ್ರಮಗಳೇನು; | ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ದೂರವಿರಲು ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳ ವಿವರಗಳು ಈ ಕೆಳಕಂಡಂತ್ತಿರುತ್ತದೆ :<br>• ಪೊಲೀಸ್ ಇಲಾಖಾ ವತಿಯಿಂದ ಡಿಸೆಂಬರ್-2023ರ ಮಾಹೆಯಲ್ಲಿ ವಿಶೇಷ ಕಾರ್ಯಾಚರಣೆಯನ್ನು ಕೈಗೊಂಡು 2409 ಶಾಲಾ-ಕಾಲೇಜುಗಳಲ್ಲಿ 3,95,253 ಮಕ್ಕಳಿಗೆ ಬೋಧನೆ.<br>• ಜೂನ್ 2024 ರಲ್ಲಿ ಕೈಗೊಂಡ ವಿಶೇಷ ಕಾರ್ಯಾಚರಣೆಯಲ್ಲಿ 3602 ಶಾಲಾ-ಕಾಲೇಜುಗಳಲ್ಲಿ 5.5 ಲಕ್ಷ ಮಕ್ಕಳಿಗೆ ಬೋಧನೆ.<br>• ಜೂನ್ 26, 2024 ರಂದು ಡ್ರಗ್ಸ್ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಅಂತರಾಷ್ಟ್ರೀಯ ದಿನ ಆಚರಣೆಯಂದು ಸುಮಾರು 4000 ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಬೋಧನೆ.<br>• ಸರ್ಕಾರದ ವತಿಯಿಂದ Drugs Free Karnataka Mobile App ಅನ್ನು ಬಿಡುಗಡಗೊಳಿಸಲಾಗಿದೆ. |
| ಊ) | ನೂತನ ವರ್ಷಾಚರಣೆ ಹಿನ್ನೆಲೆಯಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಣೆ ಕುರಿತಂತೆ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ: | ನೂತನ ವರ್ಷಾಚರಣೆ ಹಿನ್ನೆಲೆಯಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಣೆ ಕುರಿತಂತೆ ಈ ಕೆಳಕಂಡ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತದೆ:<br>• ನೂತನ ವರ್ಷಾಚರಣೆ ಹಿನ್ನೆಲೆಯಲ್ಲಿ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ನಿಷೇದಿತ ಮಾದಕ ವಸ್ತುಗಳನ್ನು ಮಾರಾಟ ಮಾಡುವ ಡ್ರಗ್ ಪೆಡ್ಲರ್‌ಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಹೆಚ್ಚಿನ ದಾಳಿ ಪ್ರಕರಣಗಳನ್ನು ದಾಖಲಿಸುವ ಬಗ್ಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಕ್ರಮ ಕೈಗೊಂಡಿರುತ್ತದೆ.<br>• ಹೊಸ ವರ್ಷಾಚರಣೆ ಮಾಡುತ್ತಿರುವ ಹೋಟೆಲ್ ಮತ್ತು ಇವೆಂಟ್ ನಡೆಸುವ ಮನರಂಜನಾ ಸ್ಥಳಗಳನ್ನು ಗುರುತಿಸಲಾಗಿದ್ದು ನಿಗಾ ವಹಿಸಲಾಗಿರುತ್ತದೆ.<br>• ಇಂಜಿನೀಯರಿಂಗ್ ಕಾಲೇಜ್ ಮತ್ತು ಮೆಡಿಕಲ್ ಕಾಲೇಜ್‌ಗಳ ಬಳಿ ಸಿಬ್ಬಂದಿಗಳ ನಿಯೋಜನೆ ಮಾಡಿ ಡ್ರಗ್ ಪೆಡ್ಲಿಂಗ್‌ನಲ್ಲಿ ಆಸಾಮಿಗಳ ಬಗ್ಗೆ ನಿಗಾವಹಿಸಲಾಗಿರುತ್ತದೆ.<br>• ಸಿಬ್ಬಂದಿಗಳನ್ನು ಮೆಡಿಕಲ್ ಸ್ಟೋರ್‌ಗಳಿಗೆ ಕಳುಹಿಸಿ ಸೂಕ್ತ |

| | | |
|---|---|---|
| | | ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.<br>• ಡ್ರಗ್ ಪೆಡ್ಲಿಂಗ್‌ನಲ್ಲಿ ತೊಡಗಿರುವ ವಿದೇಶಿಪ್ರಜೆಗಳ ಚಲನ ವಲನಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಲಾಗಿರುತ್ತದೆ.<br>• ಡಾಗ್‌ಸ್ಕ್ವಾಡ್‌ನ ಮೂಲಕ ವಿವಿಧ ಕೊರಿಯರ್ ಕಂಪನಿಗಳಿಗೆ ಬರುವ ಪಾರ್ಸಲ್‌ಗಳನ್ನು ಚೆಕ್ ಮಾಡಿಸಲಾಗಿದ್ದು ಪರಿಶೀಲಿಸಲಾಗಿರುತ್ತದೆ.<br>• ಹೊರರಾಜ್ಯಗಳಿಂದ ಬರುವ ಬಸ್ಸುಗಳಲ್ಲಿ ಡಾಗ್‌ಸ್ಕ್ವಾಡ್ ಮೂಲಕ ಬಸ್ಸುಗಳಲ್ಲಿ ಬರುವ ಪಾರ್ಸಲ್‌ಗಳನ್ನು ತಪಾಸಣೆ ಮಾಡಿಸಲು ಕ್ರಮ ಕೈಗೊಂಡಿರುತ್ತದೆ.<br>• ಫಾರೀನ್ ಪೋಸ್ಟ್ ಆಫೀಸ್‌ಗೆ ಬರುವ ಪಾರ್ಸಲ್‌ಗಳ ಮೇಲೆ ನಿಗಾವಹಿಸಲಾಗಿರುತ್ತದೆ.<br>• ಹೊರರಾಜ್ಯಗಳಿಂದ ರೈಲುಗಳ ಮುಖಾಂತರ ಬರುವ ಪಾರ್ಸಲ್‌ಗಳ ಮೇಲೆ ನಿಗಾ ವಹಿಸಲಾಗಿರುತ್ತದೆ.<br>• ಡ್ರಗ್‌ಪೆಡ್ಲಿಂಗ್ ಪ್ರಕರಣಗಳಲ್ಲಿ ಈಗಾಗಲೇ ದಸ್ತಗಿರಿಯಾಗಿ ಜೈಲಿನಿಂದ ಬಿಡುಗಡೆಯಾಗಿರುವ ಆಸಾಮಿಗಳು ಮತ್ತು ಓಪಿ ಆಸಾಮಿಗಳನ್ನು ಪತ್ತೆಮಾಡಿ ಸದರಿ ಆಸಾಮಿಗಳ ಮೇಲೆ ನಿಗಾ ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ನೂತನ ವರ್ಷಾಚರಣೆ ಹಿನ್ನಲೆಯಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಣೆ ಕುರಿತಂತೆ ಪ್ರತಿಯೊಂದು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವಿಶೇಷವಾದ ಯೋಜನೆಗಳನ್ನು ರೂಪಿಸಿಕೊಳ್ಳಲಾಗುತ್ತಿದೆ.<br>• ಮುನ್ನೆಚ್ಚರಿಕೆಯ ಕ್ರಮವಾಗಿ ನೂತನ ವರ್ಷಾಚರಣೆ ಹಿನ್ನಲೆಯಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ತಡೆಯಲು ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. ಹೋಟೆಲ್ ಮತ್ತು ಬಾರ್ & ರೆಸ್ಟೋರೆಂಟ್‌ಗಳಿಗೆ ಭೇಟಿ ಕೊಟ್ಟು ತಪಾಸಣೆಯನ್ನು ನಡೆಸಲಾಗಿದೆ.<br>• ಬೀಟ್ ಸಿಬ್ಬಂದಿಗಳಿಗೆ ಮಾದಕ ವಸ್ತುಗಳ ಅಕ್ರಮ ಸಾಗಣಿ ನಡೆಯದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ.<br>• ರಾಜ್ಯ ಮತ್ತು ಅಂತರ್ ಜಿಲ್ಲಾ ಗಡಿ ಪ್ರದೇಶಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ನಿರ್ವಹಿಸಿ, ವಿಶೇಷ ಕಾರ್ಯಚಾರಣೆಯನ್ನು ನಡೆಸಲಾಗುತ್ತಿದೆ. |
| ಊ) | ಡ್ರಗ್ಸ್ ದಂಧೆ ತಡೆಗೆ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ | ಸಿಐಡಿ ಘಟಕದಲ್ಲಿ ಎಡಿಜಿಪಿ ಮತ್ತು ಡಿಐಜಿಪಿ, ಮಾದಕ ವಸ್ತು ಮತ್ತು ಸೈಬರ್ ಅಪರಾಧಗಳು ಹುದ್ದೆಗಳನ್ನು ಸೃಜಿಸಲಾಗಿರುತ್ತದೆ. |

| | | |
|---|---|---|
| | (ಎನ್.ಸಿ.ಬಿ) ಮಾದರಿಯಲ್ಲಿ ರಾಜ್ಯದಲ್ಲಿ ಮಾದಕ ದ್ರವ್ಯ ನಿಗ್ರ ಪಡೆ (ಎ.ಎನ್.ಟಿ.ಎಫ್) ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ: ಡ್ರಗ್ಸ್ ಜಾಲ ನಿರ್ಮೂಲನೆಗೆ ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆಯೇ? (ಆಗಿದ್ದಲ್ಲಿ, ಸಂಪೂರ್ಣ ವಿವರಗಳನ್ನು ಒದಗಿಸುವುದು) | ಸಿಐಡಿ ಘಟಕವನ್ನು ಪುನರ್ವಿಂಗಡಣೆ ಮಾಡಿ ನೂತನವಾಗಿ ಎಡಿಜಿಪಿ ಸಿ&ಎನ್ ಹುದ್ದೆ ಹಾಗೂ ಒಂದು ಡಿಐಜಿಪಿ, ಸಿ&ಎನ್ ಹುದ್ದೆಯನ್ನು ಸೃಜಿಸಲಾಗಿರುತ್ತದೆ. 'ಮಾದಕ ವಿರೋಧಿ ಕಾರ್ಯಪಡೆ' (Anti-Narcotic Task Force) ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

ಸಂಖ್ಯೆ : ಹೆಚ್‌ಡಿ 53 ಪಿಎನ್‌ಡಿ 2024

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

## ಅನುಬಂಧ-1

**NDPS ACT - ARRESTED Details**

| SL NO | District/Units Name | 2024 (Nov) Arrested Count |
|---|---|---|
| 1 | Bagalkot | 13 |
| 2 | Ballari | 29 |
| 3 | Belagavi City | 21 |
| 4 | Belagavi Dist | 20 |
| 5 | Bengaluru City | 338 |
| 6 | Bengaluru Dist | 85 |
| 7 | Bidar | 21 |
| 8 | Chamarajanagar | 26 |
| 9 | Chickballapura | 41 |
| 10 | Chikkamagaluru | 18 |
| 11 | Chitradurga | 33 |
| 12 | CID | 0 |
| 13 | Coastal Security Police | 20 |
| 14 | Dakshina Kannada | 26 |
| 15 | Davanagere | 26 |
| 16 | Dharwad | 19 |
| 17 | Gadag | 7 |
| 18 | Hassan | 108 |
| 19 | Haveri | 18 |
| 20 | Hubballi Dharwad City | 206 |
| 21 | ISD Bengaluru | 0 |
| 22 | K.G.F | 24 |
| 23 | Kalaburagi | 5 |
| 24 | Kalaburagi City | 20 |
| 25 | Karnataka Railways | 57 |
| 26 | Kodagu | 63 |
| 27 | Kolar | 20 |
| 28 | Koppal | 0 |
| 29 | Mandya | 11 |
| 30 | Mangaluru City | 685 |
| 31 | Mysuru City | 60 |
| 32 | Mysuru Dist | 20 |
| 33 | Raichur | 3 |
| 34 | Ramanagara | 51 |
| 35 | Shivamogga | 107 |
| 36 | Tumakuru | 95 |
| 37 | Udupi | 37 |
| 38 | Uttara Kannada | 49 |
| 39 | Vijayanagara | 29 |
| 40 | Vijayapur | 6 |
| 41 | Yadgir | 0 |
| **Grand Total** | | **2417** |

ಅನುಬಂಧ-2

**Cases registered for consumption u/s 27(B) of NARCOTIC DRUGS & PSHYCOTROPIC SUBSTANCES Act -for the period 1/1/2024 to 30/11/2024**

| Sl.No. | Name of Unit | No. of Cases |
|---|---|---|
| 1 | Bagalkot | 4 |
| 2 | Ballari | 3 |
| 3 | Belagavi City | 16 |
| 4 | Belagavi Dist | 1 |
| 5 | Bengaluru City | 6 |
| 6 | Bengaluru Dist | 11 |
| 7 | Chickballapura | 2 |
| 8 | Chikkamagaluru | 99 |
| 9 | Chitradurga | 20 |
| 10 | Coastal Security Police | 5 |
| 11 | Dakshina Kannada | 23 |
| 12 | Davanagere | 16 |
| 13 | Dharwad | 1 |
| 14 | Gadag | 3 |
| 15 | Hassan | 43 |
| 16 | Haveri | 2 |
| 17 | Hubballi Dharwad City | 86 |
| 18 | K.G.F | 1 |
| 19 | Kalaburagi | 1 |
| 20 | Kalaburagi City | 6 |
| 21 | Kodagu | 30 |
| 22 | Kolar | 2 |
| 23 | Mandya | 3 |
| 24 | Mangaluru City | 674 |
| 25 | Mysuru City | 1 |
| 26 | Mysuru Dist | 3 |
| 27 | Raichur | 2 |
| 28 | Ramanagara | 15 |
| 29 | Shivamogga | 194 |
| 30 | Tumakuru | 22 |
| 31 | Udupi | 70 |
| 32 | Uttara Kannada | 21 |
| 33 | Vijayanagara | 6 |
| | **Total** | **1392** |